ಕೊಳ್ಳೇಗಾಲ ಮಹದೇಶ್ವರ ಸ್ವಾಮಿ ಬೆಟ್ಟದಲ್ಲಿ ನಡೆದ ಜಿಲ್ಲಾ ಪರಿಷತ್ತು ಅಧ್ಯಕ್ಷರುಗಳ ಸಮ್ಮೇಳನದ ಕುರಿತು

೪೧೨೨ ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಳ್ಳೇಗಾಲದ ಮಹದೇಶ್ವರ ಸ್ವಾಮಿ ಬೆಟ್ಟದಲ್ಲಿ ರಾಜ್ಯದ ಜಿಲ್ಲಾ ಪರಿಷತ್ತುಗಳ ಅಧ್ಯಕ್ಷರುಗಳ ಸಮ್ಮೇಳನವು ಯಾವಾಗ ಎಷ್ಟು ದಿನ ನಡೆದಿದೆ?

ಆ) ಈ ಸಮ್ಮೇಳನಕ್ಕೆ ದೇವಸ್ಥಾನದ ಪತಿಯಿಂದ ಹಣವನ್ನು ವೆಚ್ಚ ಮಾಡಲಾಗಿದೆಯೇ? ಹಾಗಿದ್ದಲ್ಲಿ ಇದಕೆ ವೆಚ್ಚ ಮಾಡಲಾದ ಹಣವೆಷ್ಟು ಪೂರೈಸುವ ವಿಚಾರ ನಿಜವೇ ?

ಇ) ಹಾಗೂ ಇದಕ್ಕೆ ಪೂರ್ವಭಾವಿ ಅನುಮತಿ ಪಡೆಯಲಾಗಿದೆಯೇ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಮಹದೇಶ್ವರ ಸ್ವಾಮಿ ಬೆಟ್ಟದಲ್ಲಿ ಜಿಲ್ಲಾ ಪರಿಷತ್ತುಗಳ ಅಧ್ಯಕ್ಷರ ಸಮ್ಮೇಳನ ದಿನಾಂಕ ೨-೯-೧೯೮೮ರಿಂದ ೪-೯-೧೯೮೮ರ ವರೆಗೆ ನಡೆದಿದೆ.

ಆ) ದೇವಸ್ಥಾನದ ಪತಿಯಿಂದ ರೂ. ೩.೦೬೫೫೫ ಗಳನ್ನು ವೆಚ್ಚ ಮಾಡಲಾಗಿದೆ.

ಇ) ೧೩೮೮ನೇ ಪಸಲಿಗೆ ಜಿಲ್ಲಾಧಿಕಾರಿಗಳಿಂದ ಪಾಂಜೂರಾದ ಆಯವ್ಯಯದಲ್ಲಿ ಇಂತಹ ಸಂದರ್ಭಗಳ ವೆಚ್ಚಕ್ಕಾಗಿ ಅವಕಾಶ ಮಾಡಿರುವುದರಿಂದ ಪೂರ್ವಾನುಮತಿ ಪಡೆಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಕರ್ನಾಟಕ ಸರ್ಕಾರದ ಉಪಾಹಾರ ಗೃಹದ ನೌಕರರನ್ನು ಖಾಯಂ ಮಾಡುವ ಬಗ್ಗೆ

೫೧೧೧ ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರದ ಸಚಿವಾಲಯದ ಉಪಾಹಾರ ಗೃಹದಲ್ಲಿ ಕಳೆದ ೧೩ ವರ್ಷಗಳಿಂದಲೂ ಕೆಲಸ ಮಾಡುತ್ತಿರುವ ನೌಕರರನ್ನು ಖಾಯಂ ಮಾಡುವ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಸರ್ಕಾರದವರು ಭರವಸೆ ನೀಡಿರುವುದು ನಿಜವಲ್ಲವೆ,

ಆ) ಹಾಗಿದ್ದಲ್ಲಿ ಅವರನ್ನು ಖಾಯಂ ಮಾಡಲು ಸರ್ಕಾರದವರು ಈವರೆವಿಗೆ ಕೈಗೊಂಡಿರುವ ಕ್ರಮಗಳೇನು,

ಇ) ಇವರನ್ನು ಯಾವಾಗ ಖಾಯಂ ಮಾಡಲಾಗುವುದು?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ)
ಆ) } ಹೌದು ಈ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.
ಇ)

ಪೋಲೀಸ್ ಸಬ್ ಇನ್ಸ್‌ಪೆಕ್ಟರುಗಳ (ಸಿವಿಲ್) ಹುದ್ದೆಗಳ ನೇಮಕಾತಿ

೫೦೨೮ ಶ್ರೀ ಎ. ಕೃಷ್ಣಪ್ಪ, (ವರ್ತೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೩-೮೪ರಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ (ಸಿವಿಲ್) ಹುದ್ದೆಗಳಿಗೆ ನೇಮಕಾತಿಗಾಗಿ ಅರ್ಜಿಗಳನ್ನು ಕರೆದಿರುವುದು ನಿಜವೆ